**ಕರ್ನಾಟಕ ಸರ್ಕಾರ**

ಆಯುಕ್ತರ ಕಛೇರಿ,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳ ಇಲಾಖೆ.
ಕೆ.ಆರ್. ವೃತ್ತ, ಬೆಂಗಳೂರು-560 001.
ದೂರವಾಣಿ: 91-080-22212408
ಫ್ಯಾಕ್ಸ್: 91-080-22277528

ನಂ. ಎಸ್‌ಎಸ್‌ಎಲ್‌ಆರ್.ಆಡಳಿತ/1/2008-09

ದಿನಾಂಕ : 20.1.2009

## ಸುತ್ತೋಲೆ

ವಿಷಯ:- ಭೂಮಾಪನ ಇಲಾಖೆಯ ಕಾರ್ಯನಿರ್ವಾಹಕ ನೌಕರರ ಕಾನೂನು ಬಾಹಿರ ಮುಷ್ಕರದ ನಿಮಿತ್ತ ಸಾರ್ವಜನಿಕರಿಗೆ ಅನಾನುಕೂಲವಾಗದಂತೆ ಭೂಮಾಪನ ಶಾಖೆಯಲ್ಲಿ ಪರ್ಯಾಯ ವ್ಯವಸ್ಥೆ ಕಲ್ಪಿಸುವ ಕುರಿತು.

******

ಸರ್ಕಾರವು ಹಕ್ಕು ಬದಲಾವಣೆ ಪ್ರಕರಣಗಳಲ್ಲಿ ಮ್ಯುಟೇಷನ್ ಪೂರ್ವ (11ಇ) ನಕ್ಷೆಗಳನ್ನು ಹಾಜರುಪಡಿಸುವುದು ಕಡ್ಡಾಯಪಡಿಸಿರುತ್ತದೆ. ಜಾರಿಯಲ್ಲಿರುವ 11ಇ ನಕ್ಷೆಯ ಪರಿಶೀಲನೆ ಮತ್ತು ದೃಢೀಕರಣ ಕಾರ್ಯವನ್ನು ಇಲಾಖೆ ಭೂಮಾಪಕರು ಮತ್ತು ಪರ್ಯಾವೇಕ್ಷಕರು ನಿರ್ವಹಿಸುತ್ತಾರೆ.

ಇಲಾಖೆಯ ಭೂಮಾಪಕರುಗಳು ತಮ್ಮ ಸಂಘದ ಮುಖಾಂತರ ಹಲವು ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟು, ಕಾನೂನು ಬಾಹಿರ ಮುಷ್ಕರವನ್ನು ಹೂಡಿರುತ್ತಾರೆ. ನೌಕರರ ಬಹುಪಾಲು ಬೇಡಿಕೆಗಳನ್ನು ಸರ್ಕಾರ ಈಡೇರಿಸಿದ್ದರೂ, ಮುಷ್ಕರವನ್ನು ಕೈಬಿಟ್ಟು ಕಛೇರಿಗಳಿಗೆ ಹಾಜರಾಗಲು ಸರ್ಕಾರವು ಮಾಡಿದ ಮನವಿಗೂ ಸಹ ಮನ್ನಣೆ ನೀಡದೆ ಮುಷ್ಕರವನ್ನು ಮುಂದುವರೆಸಿರುತ್ತಾರೆ.

ಕಾನೂನುಬಾಹಿರ ಮುಷ್ಕರದಿಂದ ಸಾರ್ವಜನಿಕರಿಗೆ 11ಇ ನಕ್ಷೆ ವಿತರಣೆ ಕಾರ್ಯದಲ್ಲಿ ಯಾವುದೇ ವ್ಯತ್ಯಯ ಉಂಟಾಗದಂತೆ ಸಾರ್ವಜನಿಕರಿಗೆ ಅನಾನುಕೂಲವಾಗುವುದನ್ನು ತಪ್ಪಿಸಲು ಈ ಕೆಳಕಂಡಂತೆ ಪರ್ಯಾಯ ವ್ಯವಸ್ಥೆ ತಕ್ಷಣದಿಂದ ಜಾರಿಗೊಳಿಸಿದೆ.

1. ಪ್ರತಿ ತಾಲ್ಲೂಕಿನಲ್ಲಿ ತಹಶೀಲ್ದಾರರು ಒಬ್ಬ ಸಿಬ್ಬಂಧಿ (ಗುಮಾಸ್ತ. ಗ್ರಾ.ಲೆ/ ರಾ.ನಿ:) ಯನ್ನು ಪರವಾನಗಿ ಭೂಮಾಪಕ ಕಾರ್ಯಗಳ ನಿರ್ವಹಣೆಗೆ ನಿಯುಕ್ತಿಗೊಳಿಸುವುದು. ನಿಯುಕ್ತಿಗೊಂಡ ಸಿಬ್ಬಂದಿಯು, ಸಾರ್ವಜನಿಕರು ಮ್ಯುಟೇಷನ್ ಪೂರ್ವ ನಕ್ಷೆಗೆ ಸಂಬಂಧಿಸಿದಂತೆ ಕೋರಿಕೆ ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸುವುದು ಮತ್ತು ಪರವಾನಗಿ ಭೂಮಾಪಕರು ಅಳತೆ ಪೂರೈಸಿದ ಕಡತಗಳನ್ನು ವಾಪಸ್ಸು ಪಡೆಯುವುದು.

2. ಯಾವ ತಾಲ್ಲೂಕುಗಳಲ್ಲಿ ನೆಮ್ಮದಿ ಕೇಂದ್ರಗಳ ಮೂಲಕ ನಿರ್ವಹಣೆಯಲ್ಲಿರುವ ಯೋಜನೆ ಜಾರಿಯಲ್ಲಿದೆಯೋ ಅಂತಹ ತಾಲ್ಲೂಕು ಕಛೇರಿಗಳಲ್ಲಿ ಸಾರ್ವಜನಿಕರು ಮ್ಯುಟೇಷನ್ ಪೂರ್ವ ನಕ್ಷೆ ಕೋರಿ ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸುವ ಜೊತೆಯಲ್ಲಿಯೇ ಪರವಾನಗಿ ಭೂಮಾಪಕರುಗಳಿಂದ ಅಳತೆ ಪೂರೈಸಿದ ಕಡತಗಳನ್ನು ಸಹ ವಾಪಸ್ಸು ಪಡೆಯುವುದು.

3. ಸಾರ್ವಜನಿಕರಿಂದ ಸ್ವೀಕೃತಿಯಾದ ಕೋರಿಕೆಗಳಿಗೆ ಪರವಾನಗಿ ಭೂಮಾಪಕರುಗಳಿಗೆ ಅಳತೆ ಕಾರ್ಯ ಕೈಗೊಳ್ಳಲು ಅವಶ್ಯಕವಿರುವ ಧೃಡೀಕೃತ ನಕಲುಗಳನ್ನು ಸಿದ್ಧಪಡಿಸಿ ವಿತರಿಸಲು ಕ್ರಮಕೈಗೊಳ್ಳುವುದು. ಅಭಿಲೇಖಾಲಯದ ಉಸ್ತುವಾರಿಗೆ ತಹಶೀಲ್ದಾರರು ಒಬ್ಬ ಕಂದಾಯ ನಿರೀಕ್ಷಕರು / ಗುಮಾಸ್ತರನ್ನು ನಿಯುಕ್ತಿಗೊಳಿಸುವುದು. ಹಿಂದಿನಿಂದಲೂ ಅಭಿಲೇಖಾಲಯದಲ್ಲಿ ಕೆಲಸ ನಿರ್ವಹಿಸಿದ ಗ್ರೂಪ್ ಡಿ ನೌಕರರನ್ನು ಉಪಯೋಗಿಸಿಕೊಂಡು ಅಗತ್ಯ ನಕಲುಗಳನ್ನು ತಯಾರಿಸಲು ಗ್ರಾಮದ ದಫ್ತರುಗಳನ್ನು ನೀಡುವುದು. ನಕಲುಗಳನ್ನು ತಯಾರಿಸಲು ನಿವೃತ್ತ ಭೂಮಾಪಕರು/ ಯೋಜನೆ ಮೇಲ್ವಿಚಾರಕರು ಅಥವಾ ನುರಿತ ಪರವಾನಗಿ ಭೂಮಾಪಕರನ್ನು ಬಳಸಿಕೊಂಡು ನಕಲುಗಳನ್ನು ಸಿದ್ಧಪಡಿಸುವುದು ಹಾಗೂ ಈ ದಾಖಲೆಗಳನ್ನು ಆರ್.ಆರ್.ಶಿರಸ್ತೇದಾರರಿಂದ ಧೃಡೀಕರಿಸಿ ಪರವಾನಗಿ ಭೂಮಾಪಕರಿಗೆ ವಿತರಿಸುವುದು.

4. ಧೃಡೀಕೃತ ದಾಖಲೆಗಳು ಸಿದ್ಧಗೊಂಡ ನಂತರ ಅರ್ಜಿಗಳನ್ನು ಜೇಷ್ಠತೆ ಮೇರೆಗೆ ಪರವಾನಗಿ ಭೂಮಾಪಕರಿಗೆ ವಿತರಿಸುವುದು. ಅಳತೆ ಪೂರೈಸಿದ ಕಡತಗಳನ್ನು ನಿಯುಕ್ತಿಗೊಳಿಸಿದ ಸಿಬ್ಬಂದಿಗೆ ವಾಪಸ್ಸು ನೀಡುವುದು.

5. ಪರವಾನಗಿ ಭೂಮಾಪಕರು ಹಿಂತಿರುಗಿಸಿದ ಕಡತಗಳ ಜೊತೆಯಲ್ಲಿ ಅಳತೆಗೆ ನೀಡಿದ್ದ ಧೃಡೀಕೃತ ನಕಲುಗಳನ್ನು ಲಗತ್ತಿಸಿರುವುದನ್ನು ಖಾತರಿ ಪಡಿಸಿಕೊಂಡು ವಾಪಸ್ಸು ಪಡೆಯುವುದು.

6. ಪರವಾನಗಿ ಭೂ ಮಾಪಕರುಗಳಿಂದ ವಾಪಸ್ಸು ಪಡೆದ ಕಡತಗಳನ್ನು ಮತ್ತು ಸಿದ್ಧಪಡಿಸಿರುವ ಮ್ಯುಟೇಷನ್ ಪೂರ್ವ ನಕ್ಷೆಯನ್ನು ಲಗತ್ತಿಸಿರುವ ಧೃಡೀಕೃತ ನಕಲುಗಳನ್ನು ಬಳಸಿಕೊಂಡು ಪರಿಶೀಲಿಸುವುದು.
ಈ ಕಡತಗಳನ್ನು ಪರಿಶೀಲಿಸಲು ಇಲಾಖೆಯಿಂದ ನಿವೃತ್ತರಾಗಿರುವ ಭೂಮಾಪಕರು/ಪರ್ಯಾವೇಕ್ಷಕರು/ಅಧೀಕ್ಷಕರು (ತಾಂ) ರವರನ್ನು ಬಳಸುವುದು ಅಥವಾ ನಿವೃತ್ತ ಭೂಮಾಪಕರು/ಪರ್ಯಾವೇಕ್ಷಕರು/ಅಧೀಕ್ಷಕರು(ತಾಂ) ಇವರು ಲಭ್ಯವಿಲ್ಲದಿದ್ದರೆ, ನುರಿತ ಪರವಾನಗಿ ಭೂಮಾಪಕರುಗಳನ್ನು ಗುರುತಿಸಿ ಆಯ್ಕೆಮಾಡಿಕೊಂಡು ಕೆಲಸ ಪೂರೈಸುವುದು.

7. ಪರವಾನಗಿ ಭೂಮಾಪಕರು ಸಲ್ಲಿಸಿದ ನಕ್ಷೆ ಹಾಗೂ ಕಡತಗಳು ಪರಿಶೀಲನೆಯಾದ ನಂತರ, ತಹಶೀಲ್ದಾರರ / ಶಿರಸ್ತೇದಾರರ ಧೃಡೀಕರಣದೊಂದಿಗೆ ಸಾರ್ವಜನಿಕರಿಗೆ ವಿತರಿಸುವುದು.

ಮೇಲಿನ ಪರ್ಯಾಯ ವ್ಯವಸ್ಥೆಯ ಸಾರಾಂಶ ಈ ಕೆಳಗಿನಂತಿದೆ. –

1) ಒಬ್ಬ ನುರಿತ ಪರವಾನಗಿ ಭೂಮಾಪಕರನ್ನು ಸಾರ್ವಜನಿಕರಿಂದ ಮ್ಯುಟೇಷನ್ ಪೂರ್ವ ನಕ್ಷೆ ಕೋರಿ ಬರುವ ಅರ್ಜಿಗಳನ್ನು ಸ್ವೀಕರಿಸಲು ಬಳಸುವುದು.

2) ನಿವೃತ್ತ ಭೂಮಾಪಕರು/ ಪರ್ಯಾವೇಕ್ಷಕರು/ಅಧೀಕ್ಷಕರು(ತಾಂ) ಅಥವಾ ನುರಿತ ಪರವಾನಗಿ ಭೂಮಾಪಕರನ್ನು ಆಳತೆಗೆ ಅಗತ್ಯವಿರುವ ದೃಢೀಕೃತ ನಕಲುಗಳನ್ನು ತಯಾರಿಸಲು ಬಳಸುವುದು.

3) ಒಬ್ಬ ನಿವೃತ್ತ ಭೂಮಾಪಕರು/ ಪರ್ಯಾವೇಕ್ಷಕರು/ಅಧೀಕ್ಷಕರು(ತಾಂ) ಅಥವ ನುರಿತ ಪರವಾನಗಿ ಭೂಮಾಪಕರನ್ನು ಆಳತೆಗೆ ಅಗತ್ಯವಿರುವ ದೃಢೀಕೃತ ದಾಖಲೆ ತಯಾರಿಸಲು ಬಳಸುವುದು.

ಮ್ಯುಟೇಷನ್ ಪೂರ್ವ ನಕ್ಷೆಗೆ ಬೇಡಿಕೆ ಇರುವ

4) ಪಟ್ಟಣ ಸಂಖ್ಯೆಯಲ್ಲಿ ಮ್ಯುಟೇಷನ್ ಪೂರ್ವ ನಕ್ಷೆಗೆ ಬೇಡಿಕೆ ಇರುವ ತಾಲೂಕುಗಳಲ್ಲಿ ಹೆಚ್ಚುವರಿಯಾಗಿ ಮತ್ತೊಬ್ಬ ಪರವಾನಗಿ ಭೂಮಾಪಕರನ್ನು ಬಳಸುವುದು.

5) ಈ ಪರ್ಯಾಯ ವ್ಯವಸ್ಥೆಯನ್ನು ಜಾರಿಗೊಳಿಸಲು ಆಯ್ದುಗೊಂಡ ನಿವೃತ್ತ ಭೂಮಾಪಕರು/ ಪರ್ಯಾವೇಕ್ಷಕರು/ಅಧೀಕ್ಷಕರು(ತಾಂ) ಅಥವಾ ಪರವಾನಗಿ ಭೂಮಾಪಕರುಗಳಿಗೆ ಜಿಲ್ಲೆಯ ಭೂದಾಖಲೆಗಳ ಉಪ ನಿರ್ದೇಶಕರುಗಳು ತರಬೇತಿ ನೀಡುವುದು. ತರಬೇತಿ ಮತ್ತು ವ್ಯವಸ್ಥೆಯ ಅನುಷ್ಠಾನವನ್ನು ಆಯುಕ್ತರ ಕಛೇರಿಗೆ ದೈನಂದಿನ ವರದಿ ನೀಡುವುದು.

6) ಭೂದಾಖಲೆಗಳ ಉಪನಿರ್ದೇಶಕರು ಪ್ರತಿ ದಿನ 2 ರಿಂದ 3 ಕಛೇರಿಗಳಿಗೆ ಭೇಟಿ ನೀಡಿ ಕಾರ್ಯಾನುಷ್ಠಾನವನ್ನು ಪರಿಶೀಲಿಸುವುದು. ಸಾರ್ವಜನಿಕರಿಗೆ 11ಇ ನಕ್ಷೆಯ ವಿತರಣೆಯಲ್ಲಿ ವಿಳಂಬ ಮತ್ತು ತೊಂದರೆಯಾಗದಂತೆ ಕ್ರಮ ಜರುಗಿಸುವುದು.

7) ಜಿಲ್ಲಾಧಿಕಾರಿಗಳು ಭೂದಾಖಲೆಗಳ ಉಪ ನಿರ್ದೇಶಕರುಗಳಿಗೆ ಸಿಬ್ಬಂದಿ ಮುಷ್ಕರ ನಿಲ್ಲುವವರೆಗೆ ಪರ್ಯಾಯ ವ್ಯವಸ್ಥೆ ಜಾರಿ ಇರುವ ವರೆಗೂ ಇತರೆ ಯಾವುದೇ ಕೆಲಸಗಳನ್ನು ವಹಿಸದೇ ಇರುವುದು.

ಮುಷ್ಕರದ ಅವಧಿಯಲ್ಲಿ ಕಲ್ಪಿಸಲಾಗುತ್ತಿರುವ ಈ ಪರ್ಯಾಯ ವ್ಯವಸ್ಥೆಯಲ್ಲಿ ಯಾವುದೇ ತಪ್ಪು ದಾಖಲೆಗಳ ವಿತರಣೆ ಆಗದಂತೆ ಭೂದಾಖಲೆಗಳ ಉಪನಿರ್ದೇಶಕರುಗಳು ಎಚ್ಚರಿಕೆ ವಹಿಸುವುದು. ಅಂತಹ ದಾಖಲೆಗಳನ್ನು ಒದಗಿಸುವ ಹಾಗೂ ಉದ್ದೇಶಪೂರ್ವಕವಾಗಿ ತಪ್ಪು ನಕ್ಷೆ ತಯಾರಿಸುವ ಪರವಾನಗಿ ಭೂಮಾಪಕರುಗಳ ಪರವಾನಗಿ ರದ್ದುಪಡಿಸುವುದಲ್ಲದೇ ಕ್ರಿಮಿನಲ್ ಮೊಕದ್ದಮೆ ಹೂಡುವುದು.

ಈ ಮುಷ್ಕರದ ಅವಧಿಯಲ್ಲಿ ವಿತರಿಸಲಾಗುವ ನಕ್ಷೆಗಳ ಮೇಲೆ 'ಪರಿಶೀಲನೆಗೆ ಒಳಪಟ್ಟು ಅಂಗೀಕರಿಸಿದೆ' ಎಂದು ತಪ್ಪದೇ ಮೊಹರು ಹಾಕಿ ವಿತರಿಸುವುದು. ನೌಕರರು ಮುಷ್ಕರವನ್ನು ನಿಲ್ಲಿಸಿ ಕೆಲಸಕ್ಕೆ ಹಿಂತಿರುಗಿದ ಕೂಡಲೇ ಸಂಬಂದಪಟ್ಟ ಭೂಮಾಪಕರು ಮತ್ತು ಪರ್ಯಾವೇಕ್ಷಕರು ಈ ಅವಧಿಯಲ್ಲಿ ತಯಾರಿಸಿದ / ವಿತರಿಸಿದ ನಕ್ಷೆಗಳನ್ನು ಕೂಲಂಕುಷವಾಗಿ ಪರಿಶೀಲಿಸುವುದು. ಲೋಪಗಳು ಕಂಡು ಬಂದ ಮ್ಯುಟೇಷನ್ ಪೂರ್ವ ನಕ್ಷೆಗಳನ್ನು ಕೂಡಲೇ ಸರಿಪಡಿಸಿ ಕಡತದಲ್ಲಿ ವಿವರಗಳನ್ನು ದಾಖಲಿಸಿ, ಸರಿಪಡಿಸಿದ ನಕ್ಷೆಯನ್ನು (ಮೊದಲು ತಯಾರಿಸಿದ ಪರವಾನಗಿ ಭೂಮಾಪಕರಿಂದಲೇ) ಮೊದಲು ವಿತರಿಸಿರುವ ನಕ್ಷೆಯೊಂದಿಗೆ ಲಗತ್ತಿಸುವುದು. ಈ ಕಾರ್ಯಕ್ಕೆ ಬಳಸುವ ನಿವೃತ್ತ ಭೂಮಾಪಕರು / ಪರ್ಯಾವೇಕ್ಷಕರು/ಅಧೀಕ್ಷಕರು(ತಾಂ) ನುರಿತ ಪರವಾನಗಿ ಭೂಮಾಪಕರು.

4



ಈ ಮುಷ್ಕರದ ಅವಧಿಯಲ್ಲಿ ಸಾರ್ವಜನಿಕರಿಗೆ ವಿಳಂಬವಿಲ್ಲದೆ ನಕ್ಷೆಗಳನ್ನು ಒದಗಿಸಲು ಈ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗಿದ್ದು, ಮೇಲ್ನೋಟಕ್ಕೆ ಕಂಡು ಬರುವ ಲೋಪಗಳನ್ನು ಸರಿಪಡಿಸುತ್ತಾರೆ ಮತ್ತು ಮುಷ್ಕರದ ನಂತರ ಆ ಅವಧಿಯ ಎಲ್ಲಾ ನಕ್ಷೆಗಳನ್ನು ಕೂಲಂಕುಷ ಪರಿಶೀಲನೆಗೆ ಒಳಗಿಸುವುದು.

ತಾಲ್ಲೂಕು ಕಛೇರಿಯ ಮಟ್ಟದಲ್ಲಿ ಈ ಪರ್ಯಾಯ ವ್ಯವಸ್ಥೆಯನ್ನು ಸರಿಯಾಗಿ ಅನುಷ್ಠಾನಗೊಳಿಸುವ ಜವಾಬ್ದಾರಿಯು ತಹಶೀಲ್ದಾರ್‌ರವರದ್ದಾಗಿರುತ್ತದೆ. ಸಾರ್ವಜನಿಕರಿಗೆ ಅನಾನುಕೂಲ ಉಂಟಾಗದಂತೆ ಮ್ಯುಟೇಷನ್ ಪೂರ್ವ ನಕ್ಷೆಗಳ ವಿತರಣೆಯಲ್ಲಿ ಎಲ್ಲಾ ಅಗತ್ಯ ಕ್ರಮಗಳನ್ನು ಜರುಗಿಸಲು ಸೂಚಿಸಿದೆ. ಭೂದಾಖಲೆಗಳ ಉಪನಿರ್ದೇಶಕರು ಈ ಕಾರ್ಯದಲ್ಲಿ ತಹಶೀಲ್ದಾರ್‌ಗಳಿಗೆ ತಪ್ಪದೇ ಒದಗಿಸುವುದು.

ಸಾರ್ವಜನಿಕರಿಗೆ ಹಕ್ಕು ಬದಲಾವಣೆ 'ಪೂರ್ವ ನಕ್ಷೆ ನೀಡುವುದು ಕಂದಾಯ ಇಲಾಖೆಯ ಜವಾಬ್ದಾರಿಯಾಗಿದ್ದು ಸುತ್ತೋಲೆಯ ಅಂಶಗಳನ್ನು ಕೂಡಲೇ ಅನುಷ್ಠಾನಗೊಳಿಸಿ ಅನುಪಾಲನಾ ವರದಿ ಸಲ್ಲಿಸುವುದು.

ಸಹಿ/-
ಆಯುಕ್ತರು,
ಭೂಮಾಪನ ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳು, ಬೆಂಗಳೂರು

ಪ್ರತಿಗಳು:-

1. ಎಲ್ಲಾ ವಿಭಾಗಾಧಿಕಾರಿಗಳಿಗೆ ಮಾಹಿತಿಗಾಗಿ
2. ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
3. ಎಲ್ಲಾ ಉಪ ವಿಭಾಗಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
4. ಎಲ್ಲಾ ತಹಶೀಲ್ದಾರ್‌ಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
5. ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
6. ಈ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
7. ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
8. ಅಧ್ಯಕ್ಷರು, ಕರ್ನಾಟಕ ರಾಜ್ಯ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಕಾರ್ಯನಿರ್ವಾಹಕ ಸಂಘ, ಬೆಂಗಳೂರು.

ಆಯುಕ್ತರ ಪರವಾಗಿ,
ಭೂಮಾಪನ ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳು, ಬೆಂಗಳೂರು

A.R.S